# ಅಧ್ಯಾಯ-೨
# ಜನಪದ ಕಲೆಗಳ ಆಶಯ ಮತ್ತು ಅಭಿವ್ಯಕ್ತಿ

"ಮಾನವ ತನ್ನ ಭಾವನೆಯ ಅಭಿವೃದ್ಧಿಗೆ ಭಾಷೆಯನ್ನು ಕರಗತ ಮಾಡಿಕೊಂಡೊಡನೆಯೇ ಅವನ ಜೀವನದ ಸುಖ ದು:ಖಗಳು ಶಬ್ದ ರೂಪದಲ್ಲಿ ಮೈದೋರತೊಡಗಿವೆ. ಈ ರೀತಿ ಶಾಬ್ದಿಕವಾಗಿ ಹೊರಹೊಮ್ಮಿದ ಸಾಹಿತ್ಯ ಕ್ಷೇತ್ರದಲ್ಲಿ ಮೊದಲು ತಲೆಯೆತ್ತಿದುದು ಜಾನಪದ ಸಾಹಿತ್ಯ."[೧] "ಜಾನಪದ ಎಂಬುದು ಇಂದು ನಾವು ಬಳಸುತ್ತಿರುವ ಅರ್ಥದಲ್ಲಿ ತನ್ನಿಂದ ತಾನೇ ಮೂಡಿ ಬಂದುದಲ್ಲ. ಆದಿವಾಸಿ ಮನುಷ್ಯ ಒಂದು ಕಡೆ ನೆಲೆ ನಿಂತು ಸಾಂಘಿಕ ಜೀವನವನ್ನು ಆರಂಭಿಸಿದ ನಂತರ ಅವರೆಲ್ಲರ ನಡವಳಿಕೆಗಳಲ್ಲಿನ ಸಮಾನ ಅಂಶಗಳು ನಿಧಾನಕ್ಕೆ ರೂಪತಾಳುತ್ತಾ ವಿಧಿ ವಿಧಾನಗಳಾದವು. ಈ ವಿಧಿ ವಿಧಾನಗಳು ಬರುಬರುತ್ತಾ ಅವರ ಜೀವನದ ಪ್ರತಿಯೊಂದು ಹಂತದಲ್ಲಿಯೂ ಪ್ರಭಾವ ಬೀರುತ್ತಾ ತಮ್ಮ ಹಿಡಿತವನ್ನು ಬಿಗಿಗೊಳಿಸುತ್ತಾ ಬಂದು ನಿಧಾನಕ್ಕೆ ಸಂಸ್ಕೃತಿಯಾಗಿ ಮಾರ್ಪಟ್ಟವು. ಈ ಸಂಸ್ಕೃತಿ ಎಂಬುದು ಕಣ್ಣಿಗೆ ಕಾಣದ ಕೇವಲ ಆಚರಣೆಗಳಲ್ಲಿ ಮಾತ್ರ ಮನಸ್ಸಿಗೆ ಗೋಚರವಾಗುವ ಕಲ್ಪನೆಯಾಯಿತು. ಇಂಥ ಸಂಸ್ಕೃತಿಗಳು ಎಲ್ಲೆಲ್ಲಿ ಮಾನವ ಜನಾಂಗಗಳು ಒಟ್ಟೊಟ್ಟಿಗೆ ವಾಸಮಾಡಲು ಆರಂಭಿಸಿದವೋ ಅಲ್ಲೆಲ್ಲ ಬೇರೆ ಬೇರೆಯಾಗಿ, ಪ್ರಾದೇಶಿಕ ಭಿನ್ನತೆಗಳೊಂದಿಗೆ ಅಸ್ತಿತ್ವ ಪಡೆದುಕೊಳ್ಳಲಾರಂಭಿಸಿದವು. ಕಾಲಕಳೆದಂತೆ, ಬುದ್ಧಿ ಚುರುಕಾಗುತ್ತಾ ಬಂದಂತೆ, ನೆಲದ ಮೋಹ ಬೆಳೆಯುತ್ತಾ ಬಂದಂತೆ ಸಂಸ್ಕೃತಿ ನಾಗರಿಕತೆಯಾಗಿ ವಿಕಾಸಗೊಳ್ಳತೊಡಗಿತು. ಇಂಥ ನಾಗರಿತೆಯ ಇತಿಹಾಸವನ್ನು ಕೆದಕಿ ನೋಡಿದಾಗ ಅನೇಕ ಪ್ರದೇಶಗಳಲ್ಲಿ ಹೆಚ್ಚು ಕಡಿಮೆ ಒಂದೇ ಕಾಲದಲ್ಲೇ ಕಲೆಗಳು ಅರಳಲು ಆರಂಭವಾಗಿವೆ"[೨] ಎಂಬುದು ಗಮನಾರ್ಹವಾಗಿದೆ.

ಜನಪದ ಕಲೆಗಳು ಅನಕ್ಷರಸ್ಥರ ಹೃದಯದಿಂದ ಮೂಡಿ ಬಂದವು. ಅವು ಅವರ ಬದುಕಿನ ಉಸಿರಿನಲ್ಲಿ ಬೆರತು ಬಂದಿವೆ. ಅವರ ಬಾಳಿನ ಪ್ರೇರಕ ಶಕ್ತಿಯಾಗಿ ಮೂಡಿ ಬಂದದ್ದು ವಿಶೇಷವಾಗಿದೆ. ದಿನನಿತ್ಯದ ದುಡಿಮೆಯೊಂದಿಗೆ ಅಥವಾ ನಂತರ ಅವರ ಮನಸ್ಸು ಕಲೆಯೆಡೆಗೆ ತುಡಿಯುತ್ತದೆ. ಅವರ ಬದುಕಿನ ಆಸರಿಕೆ ಬೇಸರಿಕೆಗಳು ಮರೆಯುವ ದಿವ್ಯ ಔಷಧವೇ ಕಲೆಗಳು. ಅನೇಕ ಹಾಡು ಕಥೆ ಸಂಭಾಷಣೆಗಳನ್ನು ಅವರು ನೆನಪಿನಾಳದಿಂದಲ್ಲೇ ತಮ್ಮ ಜೀವನದುದ್ದಕ್ಕೂ ಬಂದಿಸಿಡುತ್ತಾರೆ. ಆ ನೆನಪಿನ ಬುತ್ತಿಯನ್ನು ತಾವು ತಮ್ಮವರೊಂದಿಗೆ ಬಿಚ್ಚಿ ಸವಿಯುತ್ತಾರೆ. ಹೀಗೆ ಒಬ್ಬರಿಂದ ಕೇಳಿದ ಹಲವು ಕಿವಿಗಳು ಅವುಗಳನ್ನು ತನ್ನದಾಗಿಸಿಕೊಂಡು ತಲೆತಲಾಂತರದಿಂದ ಮುಂದುವರೆಸಿಕೊಂಡು ಹೋಗುತ್ತಾರೆ. ಹೀಗಾಗಿ ಜನಪದ ಕಲೆಗಳು ಆನಾದಿ ಕಾಲದಿಂದಲೂ ಇಂದಿನವರೆಗೆ ಉಳಿದು ಬಂದಿವೆ ಎಂದು ಹೇಳಲಾಗುತ್ತದೆ. "ಯಾವುದೇ ಕಲೆಗೆ ಜೀವನಾನುಭವಗಳೇ ಆಕರ; ಪ್ರೇರಕ. ಜಾನಪದ ಅಗಣಿತ ಅನುಭವಗಳ ಗಣಿ. ಅದರಿಂದ ಎಲ್ಲ ಬಗೆಯ ಕಲಾವಿದರು ಪ್ರೇರಣೆ ಪಡೆಯುತ್ತಾರೆ ಮತ್ತು ಅದು ಕೇವಲ ಮನರಂಜನೆಯ ಸಾಧನ ಅಲ್ಲ ಎನ್ನುವುದನ್ನು ನಾವಿಲ್ಲಿ ಗಮನಿಸಬಹುದು. ಜಾನಪದ ಕೇವಲ (ಖುಷಿಪಡಿಸುವ) ಮನರಂಜನೆಯ ವಸ್ತು ಅಲ್ಲ. ಅದು ಉಜ್ವಲ ಸತ್ತ್ವದ ಅಂತರವಾಹಿನಿ."[೩] ಜನಪದ ಕಲೆಗಳು ಜನಪದರ ಜೀವ ಅವರ ಚೇತನ, ಹೀಗಾಗಿ ಅವನ್ನು ತನ್ನ ಮನದಾಳದಲ್ಲಿ ಹಸಿರಾಗಿ ಉಳಿಸಿಕೊಂಡು ಬಂದಿದ್ದಾರೆ. ಇದರಿಂದ ಅವರ ಬದುಕಿನ ಜನಪದ ಕಲೆಗಳ ಅಭಿವ್ಯಕ್ತಿ ಪ್ರಧಾನ ಆಶಯವಾಗಿತ್ತೆಂದು ಹೇಳಬಹುದು.

"೧೯೮೫ ರ ನೊಬೆಲ್ ಪಾರಿತೋಷಕ ಪಡೆದ ಕ್ಲಾಡ್ ಸೀಮೋ ಎಂಬ ಲೇಖಕ ಹೇಳುವಂತೆ ಮಾನವ ಬದುಕಿಗೆ ಹಸಿವು ತೃಷೆ ಉಸಿರಾಟಗಳಷ್ಟೇ ಅಗತ್ಯವಾದುದು ಕಲೆ ಮತ್ತು ಸಾಹಿತ್ಯ. ಚಿಂತನಶೀಲತೆ, ಪಾರಮಾರ್ಥಿಕ ಸತ್ಯದ ಅನ್ವೇಷಣೆ, ಕಣ್ಣಿಗೆ ಕಾಣದ ಶಕ್ತಿಗಳ ಬಗ್ಗೆ ವಿಶ್ಲೇಷಣೆ, ಸಮಾಜ ಜೀವನವನ್ನು ನಿಯಂತ್ರಿಸುವ ಮೌಲ್ಯಗಳ, ಕಲೆ, ಸಾಹಿತ್ಯಗಳ ಸೃಜನತೆ ಇವೇ ಮುಂತಾದ ಪ್ರವೃತ್ತಿಗಳನ್ನು ಅನಾದಿ

ಕಾಲದಿಂದಲೂ ಮಾನವ ಬೆಳೆಸಿಕೊಂಡು ಬಂದಿದ್ದಾನೆ. ಮಾನವನ ವಿಕಾಸದ ಇತಿಹಾಸವೆಂದರೆ ಆತ ಬೆಳೆಸಿಕೊಂಡು ಬಂದ ಮೌಲ್ಯ, ಸಂಸ್ಕೃತಿ, ಕಲೆ ಸಾಹಿತ್ಯಗಳ ಇತಿಹಾಸವೇ ಆಗಿದೆ. ಇವೆಲ್ಲ ಆತನ ನಂಬಿಕೆ, ಧಾರ್ಮಿಕ ಚಿಂತನೆಯ, ಆರಾಧನಾ ಪದ್ಧತಿಗಳ ಚೌಕಟ್ಟಿನೊಳಗೆ ಹುಟ್ಟಿ ಬೆಳೆದಿವೆ. ಆತನ ಆರಾಧನಾ ಕೇಂದ್ರಗಳು ಪಾರಮಾರ್ಥಿಕ ತತ್ತ್ವಚಿಂತನೆ ಕೇಂದ್ರಗಳೂ ಹೌದು. ಮನೋರಂಜನೆಯ ರಂಗಭೂಮಿಯೂ ಹೌದು, ಸಹಬಾಳ್ವೆ ನಡೆಸುವ ಕ್ಷೇತ್ರಗಳೂ ಹೌದು ಎಂಬಂತೆ ಪ್ರಾಗೈತಿಹಾಸಿಕ ಕಾಲದಿಂದ ಬೆಳೆದು ಬಂದಿವೆ."[೪] ಎಂಬ ಹೇಳಿಕೆಯ ಹಿನ್ನೆಲೆಯಲ್ಲಿ ಜನಪದ ಕಲೆಗಳ ಹಲವಾರು ಆಶಯಗಳನ್ನು ಕಂಡುಕೊಳ್ಳಬಹುದು.

ಸಮಾಜ ಜೀವಿಯಾದ ಮಾನವ ಇತರ ಜೀವಿಗಳಿಗಿಂತಲೂ ಶ್ರೇಷ್ಠನಾಗಿದ್ದಾನೆ. ಅವನ ಭಾಷಾ ಅಭಿವ್ಯಕ್ತಿ, ಬುದ್ಧಿಶಕ್ತಿ ವಿಶಿಷ್ಟವಾಗಿದೆ. ಬದುಕಿನಲ್ಲಿ ನಿರಂತರವಾಗಿ ಒಂದಿಲ್ಲ ಒಂದು ಶೋಧದಲ್ಲಿ ತೊಡಗಿಕೊಂಡಿರುತ್ತಾನೆ. ಜನಪದ ಕಲೆ ಮಾನವನ ಹಲವು ಅಭಿವ್ಯಕ್ತಿಗಳಲ್ಲಿ ಪ್ರಾರಂಭದ ಶೋಧವಾಗಿರಬಹುದು. ಹೀಗಾಗಿ ಅವು ಸಮಾಜದ ಸಂಸ್ಕೃತಿ ವಾಹಕವಾಗಿ ತಲೆ ತಲಾಂತರದಿಂದ ಮುಂದುವರೆದುಕೊಂಡು ಬಂದಿವೆ. ಈ ಕಲೆಗಳು ಮಾನವನ ಬದುಕನ್ನು ಉಲ್ಲಾಸಿತಗೊಳಿಸುವಲ್ಲಿ ತುಂಬಾ ಮಹತ್ವದ ಪಾತ್ರವಹಿಸಿವೆ. "ಈ ಕಲೆಗಳು ಒಮ್ಮೆ ವೈಯಕ್ತಿಕ ತುಡಿತದಿಂದ, ಮತ್ತೊಮ್ಮೆ ಸಮೂಹ ನಂಬಿಕೆಯ ಒಳಸ್ತರದಿಂದ, ಮಗದೊಮ್ಮೆ ದೈವನಿವೇದನೆಯ ಆತ್ಮಾರ್ಪಣವಾಗಿ ಮೈದೆಳೆಯುತ್ತವೆ. ಈ ಪ್ರತಿಭಾಪೂರ್ಣವಾದ ಕಲೆಗಳಿಗೆ ತಕ್ಕಂತೆ ಅವುಗಳ ಆವರಣ, ಸಾಹಿತ್ಯ, ವೇಷಭೂಷಣ, ಅಭಿನಯ, ಸಂಗೀತ, ಚಾತುರ್ಯ ಇವುಗಳು ಬದಲಾಗುತ್ತ ಹೋಗುತ್ತವೆ. ಗುಹೆಯಲ್ಲಿ ವಾಸಿಸುತ್ತಿದ್ದ ಮೂಲ ಮಾನವನಿಂದ ಹಿಡಿದು ಇಪ್ಪತ್ತನೆಯ ಶತಮಾನದ ನಾಗರಿಕ ಮಾನವನವರೆಗೂ ಇವು ಅವಸ್ಥಾಂತರಗಳನ್ನು ಉದ್ದೇಶಾಂತರಗಳನ್ನು ಪಡೆಯುತ್ತಲೇ ಬಂದಿದೆ. ಇವುಗಳ ಅವಿರ್ಭಾವ ಮತ್ತು ಆಚರಣೆಯ ಕಾಲದಲ್ಲಿ ಆತ್ಮ ಸಂತೋಷಕ್ಕಾಗಿ ದೈವ ತೃಪ್ತಿಗಾಗಿ ಮೂಡಿಬಂದರೂ ಅನಂತರದ ದಿನಗಳಲ್ಲಿ ಅವು ನಿಯಮ ಬದ್ಧವಾಗಿ, ಸಂಪ್ರದಾಯವಾಗಿ, ಪರಂಪರೆಯಾಗಿ ಮಡುಗಟ್ಟಿರುವುದು, ಲೌಕಿಕ ಪ್ರಯೋಜನಗಳಿಗಾಗಿ ಬಳಕೆಯಾಗುತ್ತಿರುವುದು ಎಂದಿನಿಂದಲೂ ನಡೆದು ಬಂದಿದೆ."[೫]

ಜನಸಮೂಹ ಒಂದೇ ಕಡೆ ನೆಲೆ ನಿಲ್ಲದೆ, ನಿರಂತರವಾಗಿ ಚಲನೆಯನ್ನು ಹೊಂದಿರುತ್ತದೆ. ಕೆಲಸ ಕಾರ್ಯ ನಿಮಿತ್ಯವಾಗಿ ಇಲ್ಲವೆ ಬರಗಾಲದ ನಿಮಿತ್ಯವಾಗಿ ಹೊಟ್ಟೆ ತುಂಬಿಸಿಕೊಳ್ಳಲು ಇನ್ನೊಂದು ಪ್ರಾಂತ್ಯಕ್ಕೆ ವಲಸೆ ಹೋಗುತ್ತಾರೆ. ಅಲ್ಲಿ ತಾತ್ಕಾಲಿಕವಾಗಿ ನೆಲೆ ನಿಲ್ಲುತ್ತಾರೆ. ಅವರಿಗರಿವಿಲ್ಲದಂತೆ ಅಲ್ಲಿನ ಕಲೆ, ಸಾಹಿತ್ಯ, ಸಂಸ್ಕೃತಿ ಮುಂತಾದವುಗಳನ್ನು ತನ್ನದಾಗಿ ಸ್ವೀಕರಿಸಿಕೊಳ್ಳುತ್ತಾರೆ. ಅನಂತರ ಕಲೆಗಳ ಅಭಿವ್ಯಕ್ತಿಯಲ್ಲಿ ಇಂಥ ಹಲವು ಬದಲಾವಣೆಗಳು ಹಾಗೂ ಅನ್ಯ ಕಲೆಗಳ ಪ್ರಭಾವವು ಒಡಮೂಡುತ್ತವೆ. ಪ್ರಾಂತ ಭೇದಗಳಿಂದ "ಮನುಷ್ಯನ ಜೀವನ ವಿಧಾನವು ಕೂಡಾ ಪರಿವರ್ತನೆ ಹೊಂದುವುದರ ಜೊತೆಗೆ ಸಾಹಿತ್ಯ, ಕಲೆ, ಸಂಸ್ಕೃತಿ, ಸಂಗೀತ ಮುಂತಾದವುಗಳೂ ಬದಲಾವಣೆಯನ್ನು ಹೊಂದುತ್ತವೆ. ಅಲ್ಲದೆ ನಡವಳಿಕೆ, ಉಡುಗೆ ತೊಡುಗೆ ಆಚಾರ ವಿಚಾರಗಳಲ್ಲೂ ವ್ಯತ್ಯಾಸವಾಗುವುದು ಸಹಜ. ಪೂರ್ತಿಯಾಗಿ ಮಾರ್ಪಾಟಾಗಲೂಬಹುದು. ಯಾವುದೇ ಕಲೆ ಎಲ್ಲಿ ಹುಟ್ಟುತ್ತದೆಯೋ ಅಲ್ಲಿಯೇ ಬೆಳೆಯುತ್ತದೆ ಎಂದು ಹೇಳುವುದು ಸಾಧ್ಯವಿಲ್ಲ. ಏಕೆಂದರೆ ಕೆಲವು ಕಲೆಗಳು ಹುಟ್ಟಿದ ಜಾಗದಲ್ಲಿಯೇ ನಶಿಸಿ ಹೋಗಿ, ಬೇರೊಂದು ಕಡೆ ಬೆಳೆದು ಅದೇ ಆ ಕಲೆಯ ಮೂಲಸ್ಥಾನ ಎನ್ನುವಷ್ಟರ ಮಟ್ಟಿಗೆ ಅಲ್ಲಿಯ ಜನ ಜೀವನದಲ್ಲಿ ಬೆರೆತು ಹೋಗಬಹುದು. ಹಾಗೆ ಬೇರೆ ಕಡೆಯಿಂದ ಬಂದ ಕಲೆಗಳು ಅಲ್ಲಿಯ ಜನರ ಆಸಕ್ತಿ, ಅಭಿರುಚಿ, ಹವಾಮಾನ, ಭೂಮಿಯ ನೈಸರ್ಗಿಕ ಗುಣ ಈ ಎಲ್ಲಾ ಪ್ರಭಾವವನ್ನು ಒಳಗೊಂಡು ಆ ಭಾಗದಲ್ಲಿ ಜನಪ್ರಿಯ ಕಲೆಗಳಾಗಬಹುದು."[೬] ಎಂಬುದು ವಿದ್ವಾಂಸರ ಅಭಿಪ್ರಾಯ. ಹೀಗಾಗಿ ಆಯಾ ಪ್ರಾಂತದ ಆಳರಸರ ಪ್ರಭುತ್ವದಿಂದ ಆಯಾ ಭಾಷೆಗೆ ದೊರೆತ ಮಾನ್ಯತೆಯಿಂದಾಗಿ ಸಾಮಾಜಿಕ, ಸಾಂಸ್ಕೃತಿಕ ಬದುಕಿನ ಮೇಲೆ ಪ್ರಭಾವ ಬಿರಿದಂತೆ ಕಲೆಗಳ ಮೇಲೂ ಪ್ರಭಾವ

ಬಿರಿವೆ. ಹೀಗಾಗಿ (ಬೀದರ ಜಿಲ್ಲೆಯ) ಗಡಿಭಾಗಗಳಲ್ಲಿ ಮರಾಠಿ ತೆಲುಗೂ ಪ್ರಭಾವದಿಂದಾಗಿ ವಿಶಿಷ್ಟ ಕಲೆಗಳು ಮೂಡಿಬರಲು ಸಾಧ್ಯವಾಗಿರುವುದನ್ನು ಇಲ್ಲಿಯ ಕಲೆಗಳ ಅಭಿವ್ಯಕ್ತಿಯಲ್ಲಿ ಗುರುತಿಸಬಹುದು.

ಯಾವುದೇ ಓದು-ಬರಹ ಕಲಿಯದ ಅಕ್ಷರ ಲೋಕದ ಬೆಳಕನ್ನು ಕಾಣದ ಜನಪದರ ಪ್ರತಿಭಾ ಶಕ್ತಿ ಅಗಾಧವಾಗಿದೆ. ಅವರು ಬದುಕನ್ನು ಕಲೆಯಾಗಿ ಕಂಡರು. ಅವರ ಅನುಭವದಾಳದಿಂದ ಮೂಡಿ ಬಂದ ಕಲೆಗಳು ವಾಸ್ತವ ಬದುಕಿನ ಪಡಿಅಚ್ಚುಗಳಾಗಿವೆ. ಈ ಹಿನ್ನೆಲೆಯಲ್ಲಿ ಅಭಿವ್ಯಕ್ತಗೊಂಡ ಜನಪದ ಕಲೆಗಳು ಪ್ರಾದೇಶಿಕವಾಗಿ ಅನೇಕ ಆಶಯ ವೈಶಿಷ್ಟ್ಯಗಳನ್ನು ಹೀಗೆ ಗುರುತಿಸಬಹುದು.

### ೧. ಶ್ರಮದೂರಗೊಳಿಸುವುದು ಇಲ್ಲವೆ ದಣಿವು ದೂರಗೊಳಿಸುವಿಕೆ

ಜನಪದರು ಕೃಷಿಕರು. ಭೂಮಿತಾಯಿಯನ್ನು ನಂಬಿ ದುಡಿಮೆ ಮಾಡುವ ಶ್ರಮ ಜೀವಿಗಳು. ದಿನನಿತ್ಯ ಹೊಲ ಮತ್ತು ಮನೆಯಲ್ಲಿ ಏಳೆಂಟು ಗಂಟೆಗಿಂತಲೂ ಹೆಚ್ಚು ಕಾಲ ಶ್ರಮದಾಯಕ ಕೆಲಸ ಕಾರ್ಯದಲ್ಲಿ ತೊಡಗುವವರು. ಜನಪದ ಕಲೆ ಪ್ರಾರಂಭದಲ್ಲಿ ಶ್ರಮ ಪರಿಹರಿಸಿಕೊಳ್ಳುವ ನೆಪದಲ್ಲಿ ಹುಟ್ಟಿದಂಥವು. ಕುಟ್ಟುವಾಗ, ಬೀಸುವಾಗ, ಹೊಲ ಊಳುವಾಗ, ಹಂತಿ ಹೊಡೆಯುವಾಗ, ಮಟ್ಟಿ ಕಟ್ಟಿದಾಗ, ಧುಮುಸ್ಸು ಮಾಡುವಾಗ ಮುಂತಾದ ಸಂದರ್ಭದಲ್ಲಿ ಕೆಲಸದ ಶ್ರಮವನ್ನು ಮರೆತು ಹಾಡಿನೊಂದಿಗೆ ಆನಂದ ಕಂಡುಕೊಳ್ಳುವುದರ ಜೊತೆಗೆ ದುಡಿಮೆಯ ದಣಿವನ್ನು ನಿವಾರಿಸಿಕೊಳ್ಳುವರು. ರಾತ್ರಿಯೆಲ್ಲಾ ಕಣದಲ್ಲಿ ಹಂತಿ ಹೊಡೆಯುವಾಗ "ಹಂತಿಯ ಹೊಡಿಬೇಕೊ ಸಂತಸ ಪಡಬೇಕೊ"[೭] ಎಂದು ಅವರು ಹಾಡುವ ಹಾಡಿನಲ್ಲಿ ರೈತರಿಗೆ ಹಂತಿ ಎಷ್ಟು ಮಹತ್ವ ಸಂದರ್ಭ ಶ್ರಮವನ್ನು ಕಂಡು ಹಿಗ್ಗುವ ಆ ರಸಗಳಿಗೆಯ ಆಶಯ ಹಾಡಿನಲ್ಲಿ ಗುರುತಿಸಬಹುದು. ಕಣ (ಖಳ) ಮಾಡುವಲ್ಲಿ ಅವರ ನಿಷ್ಠೆ ವಿಶಿಷ್ಟವಾಗಿದೆ. "ಮುತ್ತೈದೆರು ನೀರು ಹೊಡಿಬೇಕು ಖಳಕ ಲಕ್ಷ್ಮಿತಾಯಿ ಒಲಿತಾಳು"[೮] ಎನ್ನುವಲ್ಲಿ ಮುತ್ತೈದೆ ಹೆಣ್ಣು ಮಕ್ಕಳಲ್ಲಿಯೇ ಲಕ್ಷ್ಮಿ ಸ್ವರೂಪವನ್ನು ಕಂಡುಕೊಂಡ ರೈತ ನೀರು ಹೊಡೆಯುವ ನೆಪಕಾದರೂ ಮುತ್ತೈದೆರು ಖಳದಲ್ಲಿ ಓಡಾಡಿದರೆ ಲಕ್ಷ್ಮಿ ಒಲಿಯುತ್ತಾಳೆ ಎಂಬ ಅವರ ಆಶಯವು ಹಾಡಿನಲ್ಲಿ ಮೂಡಿ ಬಂದಿರುವುದು.

### ೨. ದೈವ ಭಕ್ತಿ

ಜನಪದರು ದೈವ ನಿಷ್ಠರು. ಅವರ ದೈವ ನಂಬಿಕೆ ಅಪಾರವಾದುದು. ಜನಪದರಲ್ಲಿ ಅಂಥ ದೇವರು ಇಂಥ ದೇವರು ಎಂಬ ಭೇದಭಾವ ಕಂಡುಬರುವುದಿಲ್ಲ. ತನ್ನ ಬದುಕಿಗೆ ಸುಖ, ಶಾಂತಿ, ನೆಮ್ಮದಿ ನೀಡಿದ ಎಲ್ಲ ದೇವರನ್ನು ಆರಾಧಿಸುತ್ತಾರೆ. ಅನ್ನನೀಡುವ ಭೂಮಿ, ತನ್ನ ಬೆಳೆಗೆ ಬೇಕಾಗುವ ಮಳೆ, ಬೀಸುವ ಗಾಳಿ ಹಾಗೂ ಕೃಷಿ ಕೆಲಸಕ್ಕೆ ಉಪಯೋಗವಾಗುವ ಎತ್ತು ಮುಂತಾದವುಗಳನ್ನು ಆರಾಧಿಸುವರು. "ನಮ್ಮ ಜಾನಪದರು ದೇವರನ್ನು ಕಾಣಲು ಗುಡಿ ಗುಂಡಾರಗಳಿಗೆ ಹೋಗಲಿಲ್ಲ. ಗುಡ್ಡ-ಬೆಟ್ಟಗಳನ್ನು ಹತ್ತಲಿಲ್ಲ. ಗಿಡ ಮರಗಳನ್ನು ಸುತ್ತಲಿಲ್ಲ. ಪ್ರಕೃತಿ ದೇವಿಯ ಪವಿತ್ರ ಎದೆ ಹಾಲುಂಡು ಬೆಳೆದು ಬಂದ ಇವರು ಪ್ರಕೃತಿಯಲ್ಲಿಯೇ ಪರಮಾತ್ಮನನ್ನು ಕಾಣಲು ಹಂಬಲಿಸಿದರು. ಪ್ರಕೃತಿಯಲ್ಲಿ ದೈವ ಕಾಣುವ ದೂರದೃಷ್ಟಿ ಇವರದಾಗಿತ್ತು. ಇಹದ ಬದುಕು ಫಲಪ್ರದವಾಗಲು ಪರಿಶುದ್ಧ ಮನವಿರಬೇಕು. ಮನವಿದ್ದಲ್ಲಿ ಮಾರ್ಗವಿದೆ. ಮನವಿದ್ದಲ್ಲಿ ಮಹಾದೇವನಿದ್ದಾನೆ. ಆ ಮಹಾದೇವನನ್ನು ಇವರು ಮಹಾದೇವ ನಿನ್ನ ಹೊರತು ನಾನಾರ ನಂಬಿಲ್ಲ"[೯] ಎಂದು ಹೃದಯ ತುಂಬಿದ ಭಕ್ತಿಯ ಭಾವದ ಆಶಯ ಹಾಡಿನಲ್ಲಿ ಉಕ್ಕಿ ಹರಿಯುತ್ತದೆ. "ದೈವೀ ಪ್ರಜ್ಞೆಯ ಸ್ತರವನ್ನು ಚಿತ್ರಿಸುವ, ಕೌಟುಂಬಿಕ ಬಾಂಧವ್ಯಗಳಿಗೆ ಸಂಬಂಧ ಕಲ್ಪಿಸಿ ಹಾರೈಸುವ, ಸಾಮಾಜಿಕ ಜೀವನದ ಪದರುಗಳನ್ನು ಅರುಹುವ, ಬದುಕಿನ ಸುಖ ದು:ಖಗಳನ್ನು ಮನಬಿಚ್ಚಿ ಹಾಡುವಂತಹ ಜನಪದ ಹಾಡುಗಳು ಬಹಳಷ್ಟು ಹೃದಯಂಗಮವಾಗಿವೆ. ಸುಮಧುರವಾಗಿವೆ. ಒಮ್ಮೆ ಕೇಳಿದರೆ ಮತ್ತೊಮ್ಮೆ ಕೇಳಬೇಕೆನಿಸುವಷ್ಟು ಹಿತಕಾರಿಯಾಗಿವೆ. ಕೋಳಿಯ ಕೂಗು, ಬೆಳ್ಳಿ ಚುಕ್ಕಿ ಗರತಿಯ ಬಾಳಿನಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಬೆಳಗಿನ ಜಾವದಿಂದಲೇ ಆಕೆಯ ದಿನಚರಿ ಪ್ರಾರಂಭವಾಗುತ್ತದೆ. ಮೊದಲು ದೇವರ ನಾಮಸ್ಮರಣೆ ಮಾಡುತ್ತಲೆ,

ಸಸ್ಯಜೀವಿಗಳನ್ನು, ಜೀರಿಗೆ ಬೆಳೆಯುವ ಭೂದೇವಿಯನ್ನು ಮರೆಯದೆ ವಂದಿಸಿ, ದೈನಂದಿನ ಕೆಲಸಕ್ಕೆ ಅಣಿಯಾಗುತ್ತಾಳೆ"[೧೦] ಎಂಬಲ್ಲಿ ಭೂದೇವಿ ಸರ್ವಶಕ್ತ ದೇವತೆ ಆಕೆಯ ನೆನಹು ಬದುಕಿನ ಸುಖ ಸಂತೋಷ ನೀಡುತ್ತದೆಂಬ ಆಶಯ ಜನಪದ ಗರತಿಯಲ್ಲಿ ಕಾಣಸಿಗುತ್ತದೆ.

ಜನಪದರ "ಜೀವನೋಪಯೋಗಿಯಾಗಿರುವ ಹಲವು ಸಾಧನ ಸಲಕರಣಗಳಲ್ಲಿ ಬೀಸುವ ಕಲ್ಲು ಒಂದು. ಇದು ಜನಪದರ ದೃಷ್ಟಿಯಲ್ಲಿ ಕಲ್ಲಮ್ಮ, ಸುಖ ಸಮೃದ್ಧಿಯ ಸಂಕೇತವೂ ಹೌದು. ನಮ್ಮ ಜನಪದರಲ್ಲಿ ಇದು ಕೇವಲ ಜಡವಸ್ತುವಲ್ಲ, ಸಕಲ ಸಂಪತ್ತನ್ನು ಕೊಡುವ ಮಹಾಲಕ್ಷ್ಮಿ. ಈ ಬೀಸುವ ಕಲ್ಲು ಅವರ ಪಾಲಿಗೆ ದೈವವೇ ಆಗಿದೆ. ಬೆಳಗಾದೊಡನೆ ಗರತಿ ಅದನ್ನು ನಮಸ್ಕರಿಸಿದ ಮೇಲೆಯೇ ದೈನಂದಿನ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾಳೆ. ಅವರ ಬದುಕಿನ ಸರ್ವಸ್ವವೂ ಈ ಕಲ್ಲನ್ನೇ ಆಶ್ರಯಿಸಿದೆ. ಈ ಬೀಸುವ ಕಲ್ಲು ಅವರ ಬದುಕಿನ ಜೀವನಾಡಿ ಇದು ಮನೆಯಲ್ಲಿ ಆಡಿದರೆ ಮಾತ್ರ ಮನೆಯ ಬೆಳಕು ಉಳಿಯುತ್ತದೆ ಎಂಬುದು ನಮ್ಮ ಜನಪದರ ಭಾವನೆಯಾಗಿದೆ. ಬದುಕು ಸಿಹಿಯಾಗಬೇಕಾದರೆ, ಸುಖ–ಸಮೃದ್ಧಿ ಹಾಗೂ ನೆಮ್ಮದಿಯನ್ನು ಪಡೆಯಬೇಕಾದರೆ, ಈ ಕಲ್ಲು ಸದಾ ಆಡುತ್ತಿರಬೇಕೆಂದು ಬಯಸುತ್ತಾರೆ. ಕಲ್ಲಮ್ಮ ಮಾತಾಯಿ ಮೆಲ್ಲಮ್ಮ ರಾಗೀಯ"[೧೧] ಎಂಬಲ್ಲಿ ಜನಪದ ಗರತಿಯ ಜೀವ ಸತ್ತ್ವದ ಆಶಯವು ಮೂಡಿ ಬಂದಿದೆ.

**೩.ಮನೋರಂಜನೆ**

ಜಾತ್ರೆ, ಹಬ್ಬ, ಉತ್ಸವ ಮುಂತಾದ ಸಂದರ್ಭದಲ್ಲಿ ಜನಪದರು ಮನೋರಂಜನಾ ಕಲೆಗಳನ್ನು ಏರ್ಪಡಿಸುತ್ತಿದ್ದರು. ಅವುಗಳಲ್ಲಿ ಲಾವಣಿ, ಗೀಗಿ ಹಾಡುಗಳು ವಿಶೇಷವಾಗಿವೆ. ಇತಿಹಾಸ ಚರಿತ್ರೆಯೊಂದಿಗೆ ಸಮಕಾಲೀನ ವಾಸ್ತವ ಅಂಶಗಳನ್ನು ಕುರಿತು ಹಾಡುಕಟ್ಟಿ ಹಾಡುವರು. ಬೀದರ ಜಿಲ್ಲೆಯ ಜನಪದ ಕಲೆಗಳಲ್ಲಿ ಒಂದಾದ ಕೋಲಾಟ ಕಾಲಿನ, ಗೆಜ್ಜೆನಾದದೊಂದಿಗೆ ಕೋಲಿನ ಕಣಿ ಕಣಿ ನಾದವು ಬೆರೆತು ಗತ್ತಿಗನುಗುಣವಾಗಿ ಮುಂದುವರಿಯುತ್ತದೆ. ವಿಭಿನ್ನ ವಸ್ತು ವಿಷಯವನ್ನೊಳಗೊಂಡ ಹಾಡುಗಳೊಂದಿಗೆ ಹಾಸ್ಯ ಭರಿತವಾದ ಹಾಡು ಹೇಳುತ್ತಾ ಆಡುಗರಲ್ಲಿ ಕೇಳುಗರಲ್ಲಿ ಉಲ್ಲಾಸ ಮೂಡಿಸುತ್ತಾರೆ.

"ಅತ್ತಿ ಹೆಸರು ಕತ್ತಿ ಕಾಲು
ಮಾವನ ಹೆಸರು ಮಂಚಗಿ ಕಾಲು
ಹತ್ತಿ ಬಿತ್ತೂರ ಬತ್ತಿ ಕಾಣ
ಎಳ್ಳ ಬಿತ್ತೂರ ಎಣ್ಣಿ ಕಾಣ"[೧೨]

ಹೀಗೆ ಮನರಂಜನೆಯ ಮೂಲಕ ಆನಂದದ ಆಶಯವೇ ಹಾಡಿನಲ್ಲಿ ಪ್ರಧಾನವಾಗಿ ಎದ್ದು ತೋರುತ್ತದೆ. ಜನಪದ ಕಲೆಗಳ ಮೂಲಕ ಸಾಮೂಹಿಕವಾಗಿ ಊರಿನವರೆಲ್ಲರೂ, ನೆಂಟರು, ಆತ್ಮೀಯರು, ಸ್ನೇಹಿತರು ಸಂತೋಷವಾಗಿ ಕೆಲಕಾಲ ಕಳೆದು ಮನಸ್ಸು ಹಗುರವಾಗಿಸಿಕೊಳ್ಳುವ ಉದ್ದೇಶವು ಇಲ್ಲಿದೆ. ಜನಪದ ಕಲೆಗಳ ಉದ್ದೇಶ ಮುಖ್ಯವಾಗಿ ಮನೋರಂಜನೆಯಾಗಿದ್ದರೂ, ಸತ್ಯ, ನೀತಿ, ನಿಷ್ಠೆ, ಮುಂತಾದ ಮೌಲ್ಯ ತಿಳಿಸುತ್ತಾ ಪರೋಕ್ಷವಾಗಿ ಜನಪದರ ಬದುಕನ್ನು ತಿದ್ದಿ ಹಸನಾಗಿಸುವಲ್ಲಿ ಸಹಾಯಕವಾಗುತ್ತವೆ. "ಕಲೆಗಳು ಕೇವಲ ಮನರಂಜನೆಗಾಗಿ ಎಂಬುದು ಸಾಮಾನ್ಯ ಅಭಿಪ್ರಾಯ. ಇವು ಕೇವಲ ಮನರಂಜನೆಗಾಗಿಯಷ್ಟೇ ಅಲ್ಲ, ಜನರ ದು:ಖ ದುಮ್ಮಾನಗಳ ಅಭಿವ್ಯಕ್ತಿಯೂ ಇವು ಆಗಬಲ್ಲವು. ದ್ವೇಷ–ರೋಷಗಳ ಮಾಧ್ಯಮವೂ ಆಗುವ ಸಾಧ್ಯತೆ ಇದೆ. ಪ್ರತಿಯೊಂದು ಜಾನಪದ ಕಲೆಯೂ ತನ್ನದೇ ಆದ ಒಂದು ಆಶಯವನ್ನು ಹೊಂದಿರುತ್ತದೆ."[೧೩]

**೪. ಸಾಂಘಿಕ ಬದುಕು ರೂಪಿಸುವುದು**

ಜನಪದರು ಬಡವ, ಬಲ್ಲಿದ, ಉಚ್ಚ, ನೀಚ, ಎಂಬ ಭೇದ ಭಾವ ಮರೆತು ಎಲ್ಲರೂ ಜೊತೆಗೂಡಿ ಹಾಡುವುದು, ಕುಣಿಯುವುದು, ವಾದ್ಯ ನುಡಿಸುವುದು ಮಾಡುತ್ತಾರೆ. ಜನಪದ ಕಲೆಗಳು ಕಣ್ಣಿಂದ ನೋಡಿ

ಕಿವಿಯಿಂದ ಕೇಳಿ ಆನಂದಿಸಲು ಸಮಸ್ತ ಊರಿನ ಅಕ್ಕ ಪಕ್ಕದ ಊರಿನ ಜನರು ನಿಗದಿತ ಸ್ಥಳದಲ್ಲಿ ಬಂದು ಸೇರುವರು. ಎಲ್ಲರೂ ಭೇದ ಭಾವ ಮರೆತು ನೆಲದ ಮೇಲೆ ತಾವು ತೆಗೆದುಕೊಂಡು ಒಂದ ಹಾಸಿಗೆ ಹಾಸಿ ಕುಳಿತುಕೊಳ್ಳುವರು. ಊರಲ್ಲಿ ದೊಡ್ಡಾಟ ನಡೆಯುವಾಗ ರಂಗಮಂಟಪದ ನಿರ್ಮಾಣಕ್ಕೆ ಬೇಕಾಗುವ ಗಂಗಾಳ (ತಟ್ಟೆ) ಕೊಡ, ಹಲಗೆ, ಪತ್ತರಾ, ಬಂಬು ಹಾಗೂ ಇತರ ಸಾಧನ ಸಲಕರಣೆಗಳಾದ ಸೀರೆ ಕುಪ್ಪಸ ಕೊರಳ ಹಾರ, ಓಲೆ ಮುಂತಾದವು ನೀಡಿ ಸಹಕರಿಸುವರು. ಇಲ್ಲಿ ಎಲ್ಲರೂ ಎಲ್ಲವನ್ನು ಮರೆತು ಪರಸ್ಪರು ಪ್ರೀತಿ, ವಿಶ್ವಾಸ, ಆಸಕ್ತಿಯಿಂದ ಒಂದೊಂದು ಕೆಲಸದಲ್ಲಿ ತೊಡಗುವರು. ಹೀಗೆ ಜನಪದ ಕಲೆಗಳು ಎಲ್ಲರಲ್ಲಿ ಒಗ್ಗಟ್ಟು ಮೂಡಿಸಿ, ಸಾಂಘಿಕ ಜೀವನ ರೂಪಿಸುವ ಆಶಯವನ್ನು ಹೊಂದಿರುತ್ತವೆ. "ತನಗಾದ ಆನಂದ ಎಲ್ಲರಿಗುಂಟುಮಾಡಲು ಮನುಷ್ಯ ಸಮುದಾಯ ಸೇರುವನು. ಹೀಗೆ ಮೊದಲು ಒಬ್ಬ ವ್ಯಕ್ತಿಗೆ ಸೀಮಿತವಾಗಿದ್ದದ್ದು ನಿಜವಾದ ಕಲೆಯಾಗಲು ಸಮುದಾಯ ಸೇರಿ ಸರ್ವರಿಗೂ ಸುಖ ಉಂಟು ಮಾಡುವುದು ವ್ಯಷ್ಟಿ-ಸಮಷ್ಟಿಯಾಗುವುದೇ ನಿಜವಾದ ಕಲೆಯಾಗಿದೆ. ಇದು ಬರೀ ಕಣ್ಣಿಗೆ ಆನಂದವನ್ನುಂಟು ಮಾಡುವುದು ಆಗಿರದೆ, ಆಯಾ ಜನಾಂಗದ ಆಚಾರ ವಿಚಾರ, ರೂಢಿ, ಸಂಪ್ರದಾಯ, ಪರಂಪರೆ, ನಂಬುಗೆ, ನಿಷ್ಠೆ, ಶ್ರದ್ಧೆ, ಶೀಲ, ಸತ್ತ್ವವನ್ನು ಬಿತ್ತರಿಸುವ ಮಾಧ್ಯಮವಾಗಿದೆ."[೧೪] ಎಂಬುದು ವಿದ್ವಾಂಸರ ಅಭಿಪ್ರಾಯ.

"ಜನಪದ ಜೀವನದಲ್ಲಿ ಈ ಕಲೆಗಳು ಸಾರ್ವತ್ರಿಕ ಸ್ವರೂಪವನ್ನು ಪಡೆದುಕೊಂಡು ಕಲಾವಿದರಲ್ಲಿ ಪರಸ್ಪರ ಸಹಕಾರ ಮನೋಭಾವನೆಯನ್ನು ವರ್ಧಿಸುವಲ್ಲಿ ಸಹಾಯಕವಾಗುತ್ತವೆ."[೧೫] ಜನಪದರು ತಮ್ಮ ಅನುಭಗಳನ್ನು ಅಭಿವ್ಯಕ್ತಿಯ ತಳಹದಿಯನ್ನಾಗಿ ಮಾಡಿಕೊಂಡಿದ್ದಾರೆ. ಅವುಗಳಲ್ಲಿ ತಮ್ಮ ಜೀವನಾನುಭವ ಸಮಸ್ತ ಶಕ್ತಿ ಸತ್ತ್ವಗಳನ್ನು ತುಂಬಿ ಬದುಕಿನ ಮುನ್ನಡೆಗೆ ಸಹಾಯವಾಗುವಂತೆ ಮಾಡಿದ್ದಾರೆ. ಅವರ ಅಭಿವ್ಯಕ್ತಿ ನಿರಂತರ ಸ್ಫೂರ್ತಿಯ ಚಿಲುಮೆಗಳಾಗಿ ಬದುಕಿಗೆ ಬೆಳಕು ನೀಡುವ ಸಾಧನಗಳಾಗಿವೆ. ಜನಪದ ದೈವಾರಾಧನೆಯ ಮೂಲದ ಅಭಿವ್ಯಕ್ತಿ ಪ್ರಮುಖವಾಗಿದೆ. ಭೂತೇರು, ಪುರವಂತಿಕೆ, ಡೊಳ್ಳು, ನಂದಿಕೋಲು ಕುಣಿತ ಮುಂತಾದವುಗಳು ಶೌರ್ಯದ ಅಭಿನಯಗಳಾಗಿದ್ದು ನೋಡುಗರಲ್ಲಿ ಭಕ್ತಿ ಭಾವದೊಂದಿಗೆ ಆನಂದದ ಪರವಶತೆಯನ್ನುಂಟು ಮಾಡುತ್ತವೆ. ಆದಿಶಕ್ತಿ ಜಗನ್ಮಾತೆಯಾದ ಅಂಬಾಭವಾನಿಯ ಭಕ್ತರಾದ ಭೂತೇರು ಬೀದರ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಪ್ರತಿ ಮಂಗಳವಾರ, ಶುಕ್ರವಾರ, ಹುಣ್ಣಿಮೆ, ಅಮವಾಸ್ಯೆ ಹಾಗೂ ದಸರಾ ಸಂದರ್ಭದಲ್ಲಿ ದೈವಾರಾಧನೆಯ ಅಭಿವ್ಯಕ್ತಿ ಹಾಡಿನ ಮೂಲಕ ಹರಿದು ಭಕ್ತರ ಮನ ತಣಿಸುತ್ತದೆ.

"ಜಗದಂಬಾ ಜಗದಂಬಾ
ಜಗದಂಬಾನ ದಾರೀನಾ ಏಸದಿನ ನೋಡಾಲೊ॥
\- - - - - - - - - - - -
ತುಳಜಾನೆ ಪುರದಾಕಿ ತುಕಬಾಯಿ ಬರುವಾಗ
ದುಂಡು ಮಲ್ಲಿಗೇನುದುರ್‍ಯಾವೆ"[೧೬]

"ಕಾಡಬ್ಯಾಡ ಕರಣಮಾಡೆ ಮಾದೇವಿ"[೧೭] ಎಂದು ಹಾಡಿ ಹೊಗಳಿ, ಕುಣಿದು ತಣಿದು, ದೇವಿಯ ಗುಣಗಾನ ಮಾಡುವರು. ಅವಳ ವಾಸದ ಸ್ಥಳ, ಭವ್ಯ ಮಂದಿರ, ಬಂಗಾರದ ಕಳಸ, ದೇವಿಯ ರೂಪಾಲಂಕಾರ ಮುಂತಾದ ಅಭಿವ್ಯಕ್ತಿಗಳನ್ನು ಹಾಡುಗಳಲ್ಲಿ ಗಮನಿಸಬಹುದು. ತಾಳ, ತುಂತುಣಿ, ಡೋಲಕ ವಾದ್ಯದೊಂದಿಗೆ ವೇಷಭೂಷಣ ಧರಿಸಿಕೊಂಡು ಭಕ್ತಿ ಪರವಶರಾಗಿ ಕುಣಿಯುವುದು ಅವರ ಕಲೆಯ ಪ್ರದರ್ಶನದ ಅಭಿವ್ಯಕ್ತಿಯಾಗಿದೆ.

ವೀರಭದ್ರನ ಭಕ್ತರು ಇಲ್ಲಿ ಹೆಚ್ಚಾಗಿ ಇದ್ದು, ಜಾತ್ರೆ ಹಾಗೂ ಮದುವೆ ಕಾರ್ಯಗಳಲ್ಲಿ ಪುರವಂತಿಕೆ ನಡೆಸುವರು. "ಆಹಾ ಶ್ರೀಮನ ಮಹಾದೇವನಿಗೆ ದೇವನಯ್ಯಾ"[೧೮] ಎಂದು ಉಗ್ರ ಸ್ವರದಲ್ಲಿ ಉಘ್ಘಡಿಸುತ್ತಾ ವೀರಭದ್ರನ ಮಹಿಮೆಯನ್ನು ಅಭಿವ್ಯಕ್ತಗೊಳಿಸುತ್ತಾರೆ. ವಾದ್ಯದ ಅಬ್ಬರದಲ್ಲಿ ಭಕ್ತಿ ಪರವಶರಾಗಿ ಕುಣಿದು ಅನಂತರ ಶಸ್ತ್ರ ಚುಚ್ಚಿಕೊಳ್ಳುವರು. ಇವರ ಅಭಿವ್ಯಕ್ತಿ ಎಲ್ಲರಲ್ಲಿ ಭಯ, ವಿಸ್ಮಯ, ಶಕ್ತಿ, ಭಕ್ತಿ ಮೃದು ಮನಸ್ಸಿಗೆ

ಹಿಂಸೆ ನೀಡುವಂತೆ ಕಂಡುಬರುತ್ತದೆ. ಇದೊಂದು ವೀರಾಚರಣೆಯ ಕಲೆಯಾಗಿದ್ದು, ಆಯಾ ಜನಾಂಗದ ಭಕ್ತಿಗೆ ನಿದರ್ಶನವೆನಿಸುತ್ತದೆ.

ಮಹಿಳಾ ದೈವಾಭಿವ್ಯಕ್ತಿಯಲ್ಲಿ ಬುಲಾಯಿ ಹಾಕುವುದು, ಶೀಗಿ ಹಾಡು ಹಾಡುವುದು, ಮುಂತಾದವು ಮಹತ್ವದ್ದಾಗಿವೆ. ಮಹಿಳೆಯ ಹಲವು ಹತ್ತು ಹಂಬಲಗಳು ಇಲ್ಲಿ ಅವರ ಹಾಡಾಗಿ ಅಭಿವ್ಯಕ್ತಗೊಂಡಿರುವುದನ್ನು ಗುರುತಿಸಬಹುದು. "ನಾಗರ ಪಂಚಮಿ ನಾಡ ಹೆಣ್ಣಿಗೆ ಹಬ್ಬ"[೧೯] ಎಂಬಲ್ಲಿ ಮಹಿಳೆಯರ ಅಂತರಾತ್ಮದ ಸಂತೋಷ ಅಭಿವ್ಯಕ್ತಗೊಂಡಿದೆ. ಅವಳ ತವರಿನ ತವಕ, ತಂದೆ-ತಾಯಿ, ಅಕ್ಕ-ತಂಗಿ, ಅಣ್ಣ-ತಮ್ಮ, ಗೆಳತಿ, ನೆರೆಹೊರೆ, ಬಂಧು ಬಳಗವನ್ನು ಕಾಣುವ ನೋಡುವ ಬಯಕೆ ವ್ಯಕ್ತವಾಗುತ್ತದೆ. ನಾಲ್ಕುದಿನವಾದರೂ ತವರ ಮನೆಯಲ್ಲಿ ಉಳಿದು ತಾಯಿಯ ಕೈ ತುತ್ತು ತಿಂದು-ಉಂಡು, ಉಟ್ಟು-ತೊಟ್ಟು, ಹಬ್ಬದ ದಿನ ಬುಲಾಯಿ ಹಾಕಿ ಆನಂದಿಸುವ ಅಭಿವ್ಯಕ್ತಿಯು ಇಲ್ಲಿ ಗಮನಾರ್ಹವಾಗಿದೆ. "ಹೀಗೆ ಜನಪದರ ಬದುಕಿನಲ್ಲಿ ಭಯ, ಭಕ್ತಿ, ಪ್ರೀತಿ, ಆದರಗಳು ಸಂವೇದನೆಗೊಂಡು ಮುಂದೆ ಆರಾಧನಾ ಮನೋಧರ್ಮ ತಾಳಿ ಅಲೌಕಿಕ ಆನಂದ, ತೃಪ್ತಿ ಸಂತೋಷಗಳನ್ನು ಹೊಂದಲು ಅಲೌಕಿಕ ಶಕ್ತಿಯೊಂದಿಗೆ ಕಲೆಯ ಮೂಲಕ ಒಪ್ಪಂದ ಒಡಂಬಡಿಕೆಗಳನ್ನು ಮಾಡಿಕೊಂಡಿರುವಂತೆ ಭಾಸವಾಗುತ್ತದೆ"[೨೦] ಎಂಬುದು ಸಮಂಜಸವೆನಿಸುತ್ತದೆ. ಶೀಗಿ ಹಾಡಿನಲ್ಲಿ "ಕಂಚಿನ ಗವರಿ ಕೋಲ್"[೨೧] ಎಂಬಲ್ಲಿ ಮಹಿಳೆ ತನ್ನ ಮನದ ಆಸೆ ಬಯಕೆಯನ್ನು ತನ್ನ ಆರಾಧ್ಯ ದೇವತೆಯ ಎದುರಿನಲ್ಲಿ ಬಿಚ್ಚು ಮನಸ್ಸಿನಿಂದ ಕೇಳಿಕೊಳ್ಳುವ ಅಭಿವ್ಯಕ್ತಿ ಸೊಗಸಾಗಿ ಮೂಡಿನಿಂತಿದೆ.

"ಊರ ಮುಂದಿನ ಬೇಲಿ
ಬೇಲಿಗ ಹಾಕ್ಯಾರ ಕೀಲಿ
ನಮ್ಮ ಗೌರವ್ವಗ ಇಟ್ಟಾರ ವಾಲಿ ಕೋಲಮುತ್ತಿನ ಕೋಲ್"[೨೨]

ಈ ಹಾಡಿನಲ್ಲಿ ಪ್ರಾಸಬದ್ಧವಾದ ಧಾಟಿ ಇದ್ದು, ಹಾಡಿನ ಮಧುರ ಅಭಿವ್ಯಕ್ತಿ ಮನಮುಟ್ಟುತ್ತದೆ. ಕೇಳುಗರ ಕಿವಿ ಮನ ತಣಿಸುವ ಪ್ರಕ್ರಿಯೆ ಇಲ್ಲಿದ್ದು, ದಿನ ನಿತ್ಯದ ವೇಷಭೂಷಣದಲ್ಲಿಯೇ ಇಂಪಾದ ಧ್ವನಿಯಲ್ಲಿ ಇದನ್ನು ವ್ಯಕ್ತಗೊಳಿಸುತ್ತಾರೆ.

ಕೋಲಾಟದ ಹಾಡುಗಳು ಪೌರಾಣಿಕ ವಿಷಯದಿಂದ ಹಿಡಿದು ಆಧುನಿಕ ವಿದ್ಯಮಾನಗಳವರೆಗೆ ವಸ್ತು ವೈವಿಧ್ಯತೆಯನ್ನು ಒಳಗೊಂಡಿವೆ. ಹೊತ್ತು ಹೆತ್ತು ಸಾಕಿ ಸಲುಹಿದ ಮಕ್ಕಳು ಮದುವೆಯಾಗಿ ತಮ್ಮ ಸಂಸಾರ ಬಂಧನದಲ್ಲಿ ತೊಡಗಿದಾಗ ಹೇಗೆ ಬದಲಾಗುತ್ತಾರೆ ಎಂಬುದು ಈ ಹಾಡಿನಲ್ಲಿ ವ್ಯಕ್ತವಾಗಿದೆ.

"ಹೆಂಡರ ಬಂದರ ನಾಯಿ। ತಾಯಿ ತಂದೀಗಿ ತೋರಸ್ಯಾರೊ ಭಾಯಿ
ತಾಯಿ ತಂದಿಯ ಹೊಟ್ಟೀಲಿ ಹುಟ್ಟಿ। ತಾಯಿ ತಂದಿಗೆ ಮಾಡ್ಯಾರೊ ಖೊಟ್ಟಿ"[೨೩]

ತನ್ನ ಹೆಂಡತಿ ಮಕ್ಕಳ ಪ್ರೀತಿ ಪ್ರೇಮದಲ್ಲಿ ತಂದೆ-ತಾಯಿಯನ್ನು ಅಲಕ್ಷಿಸುವ ವಾಸ್ತವ ಚಿತ್ರಣ ಹಾಡಿನಲ್ಲಿ ಅಭಿವ್ಯಕ್ತಗೊಂಡಿದೆ.

ಮೊಹರಂ ಹಬ್ಬದ ಸಂದರ್ಭದಲ್ಲಿ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಪೈತ್ರಿ ಕುಣಿತ ಇಂದು ಕೂಡಾ ಕಂಡುಬರುತ್ತದೆ. ಆಕರ್ಷಕವಾದ ಹಾಡುಗಳೊಂದಿಗೆ ಸರಳವಾದ ವೇಷಭೂಷಣ ಧರಿಸಿಕೊಂಡು ತಬಲಾ, ತಾಳ, ಮುಂತಾದ ವಾದ್ಯಗಳೊಂದಿಗೆ ಕುಣಿಯುವ ದೃಶ್ಯ ಕಣ್ಮನ ಸೆಳೆಯುತ್ತದೆ.

"ರಾಮ, ರಹೀಮ, ರಸೂಲ, ನಬಿ, ಕರೀಮ, ಸರ್ವ ಒಂದೇ ಜನ
ಸಹಸ್ರ ನಾಮದಂವ ಈಶ್ವರ ಒಬ್ಬನೆ ಬ್ಯಾರೆ ಎಲ್ಲಿಹಾನ ॥ಹಾಂ॥ಹಾಂ
ಹರಿಹರ ಎಂಬುದು ಕಲ್ಪನ, ಮಸೂದಿ ಮಂದಿರದೊಳಗೆ ಅವನೆ ಹಾನ
ಜಾತಿ ಭಾವನ ಮಾಡುವ ಹೀನ, ಆಂವ ಕುಲ ಇಲ್ದಂವನ"[೨೪]

ಎಂಬಲ್ಲಿ ರಾಮ ರಹೀಮ, ಹರಿ ಹರ ಒಂದೇ ಎಂಬ ಭಾವವು ಅಭಿವ್ಯಕ್ತಗೊಂಡಿದೆ. ಹಿಂದೂ ಮುಸ್ಲಿಂ ಭಾವೈಕ್ಯತೆಯ ಸಾರವು ಇಲ್ಲಿದೆ. ದೇವನೊಬ್ಬ ನಾಮ ಹಲವು ಎಂಬ (ಬಸವಣ್ಣನವರ) ಭಾವವು ಹಾಡಿನಲ್ಲಿ ಮೂಡಿ ಬಂದಿರುವುದನ್ನು ಕಾಣಬಹುದು.

ಲಂಬಾಣಿಯರ ಕುಣಿತವು "ದೇವಿ ಆರಾಧನೆಗಾಗಿ ಹುಟ್ಟಿಕೊಂಡು ಬಂದ ತೀಜ್ ಕುಣಿತ ಶ್ರೀ ಕೃಷ್ಣನನ್ನೂ ಮೆಚ್ಚಿಸುವ ಇದು ಒಂದು ಅಪೂರ್ವ ಕಲೆಯಾಗಿದೆ. ಶ್ರಾವಣ ಇಲ್ಲವೆ ಭಾದ್ರಪದ ಮಾಸಗಳಲ್ಲಿ ಬಿದುರಿನ ಬುಟ್ಟಿಗಳಲ್ಲಿ ಗೋಧಿ ಸಸಿಯನ್ನು ನಾಟಿಸಿ ಒಂಭತ್ತನೆಯ ದಿನಕ್ಕೆ ಕೃಷ್ಣನ ಹೆಸರಿನಲ್ಲಿ ಇದನ್ನು ಆಚರಿಸುತ್ತಾರೆ. ಒಂಭತ್ತು ದಿವಸಗಳ ವರೆಗೆ ಬೆಳೆಸಿದ ಗೋಧಿ ಸಸಿಯ ಬುಟ್ಟಿಗಳನ್ನು ತಲೆಯ ಮೇಲೆ ಹೊತ್ತು ಶ್ರೀಕೃಷ್ಣನನ್ನು ಸ್ತುತಿಸುವ ಹಾಡಿನೊಂದಿಗೆ ದಿನವಿಡಿ ಕುಣಿದು, ಕೊನೆಯಲ್ಲಿ ಸಸಿಗಳನ್ನು ನೀರಿನಲ್ಲಿ ವಿಸರ್ಜಿಸುತ್ತಾರೆ."[೨೫] ಇಲ್ಲಿ ಲಂಬಾಣಿ ಹೆಣ್ಣುಮಕ್ಕಳ ಸಂತೋಷದ ಅಭಿವ್ಯಕ್ತಿಯನ್ನು ಮನಗಾಣಬಹುದು.

'ಡೊಳ್ಳು' ದೊಡ್ಡ ಗಾತ್ರದ ಚರ್ಮವಾದ್ಯವಾಗಿದೆ. ಕುರುಬರು ಹಬ್ಬ ಹರಿದಿನ, ರೇವಣಸಿದ್ಧ, ಬೀರದೇವರ, ಮೈಲಾರಲಿಂಗ ಮುಂತಾದ ಜಾತ್ರೆ ಉತ್ಸವದಲ್ಲಿ ಈ ಡೊಳ್ಳು ಕುಣಿತ ಕಲೆಯನ್ನು ಪ್ರದರ್ಶಿಸುತ್ತಾರೆ. ಪ್ರತಿ ರವಿವಾರ, ಅಮವಾಸ್ಯೆ ಮುಂತಾದ ವಿಶೇಷ ಸಂದರ್ಭಗಳಲ್ಲಿ ಕುಳಿತುಕೊಂಡು ಡೊಳ್ಳು ಬಾರಿಸುತ್ತಾ ಹಾಡುತ್ತಾರೆ. "ಡೊಳ್ಳಿನ ಹಾಡುಗಳಿಗೆ ಹಾಲುಮತ ಪುರಾಣವೇ ಪ್ರಮುಖ ಆಕರವಾಗಿದ್ದರೂ ಶೈವ, ವೀರಶೈವ, ವೈದಿಕ ಪುರಾಣಗಳು, ರಾಮಾಯಣ, ಮಹಾಭಾರತಗಳು, ಚಾರಿತ್ರಿಕ, ಸಾಮಾಜಿಕ ವಸ್ತು ವಿಷಯಗಳು ಆಕರವಾಗಿ ಡೊಳ್ಳಿನ ಹಾಡುಗಳು ಧಾರ್ಮಿಕ ವಿಶಾಲ ಮನೋಭಾವ ಪ್ರಕಟಿಸಿವೆ."[೨೬] "ಸತ್ಯವಂತ ಧರ್ಮ ಶೀಲವಂತ ಕುರುಬ ಇರುವುದು ರೇವಣಸಿದ್ದರ ಸೇವಕ"[೨೭] ಹೀಗೆ ಹಾಡಿನಲ್ಲಿ ತಮ್ಮ ಧರ್ಮಕುರಿತು ಸತ್ಯ ಹಾಗೂ ಕುರುಬರ ಸಚ್ಚಾರಿತ್ರ್ಯ ಮತ್ತು ರೇವಣಸಿದ್ಧರ ಭಕ್ತರು ತಾವು ಎಂದು ಹೇಳುತ್ತಾ ಇಡೀ ಕುರುಬ ಕುಲದ ಹಿರಿಮೆಯ ಆಶಯವನ್ನು ಅಭಿವ್ಯಕ್ತಿಸಿರುವುದು ವಿಶೇಷವಾಗಿ ಅರಿಯಬಹುದು ಈ ಕಲೆಯ ಆಶಯ ಹಾಗು ಅಭಿವ್ಯಕ್ತಿ ಕ್ರಮ ವಿಶಿಷ್ಟವಾಗಿದ್ದು ಅದು ಹಾಡು ಹಾಗೂ ಕುಣಿತಗಳ ಮೂಲಕ ಪ್ರದರ್ಶಿತಗೊಳ್ಳುತ್ತದೆ.

ದೀಪಾವಳಿ ಹಬ್ಬದ ಸಂದರ್ಭದಲ್ಲಿ ದನಕಾಯುವ ಹುಡುಗರು ತಾವು ಹುಲ್ಲು ಮೇಯಿಸುವ ದನಕರುಗಳು ಯಾವ ಬೇನೆಯಿಂದ ಬಳಲಬಾರದು ಎಂಬ ಉದ್ದೇಶದಿಂದ ಐದು ದಿವಸ ದೀಪ ಬೆಳಗುತ್ತಾ ಹಾಡುತ್ತಾರೆ. "ಕರು ಕಟ್ಟೋ ಕರು ಬಿಡ್ಲೋ ದೊಡ್ಡೀ ತುಂಬ ದನ ಆಗ್ಲೋ"[೨೮] ಎಂಬಲ್ಲಿ ರೈತನು ಆಕಳು ಹೆಣ್ಣುಕರು ಹಾಕಿದರೆ ಮನೆ ತುಂಬ ದನಕರುಗಳಾಗುತ್ತವೆ. ಗಂಡು ಕರು ಹಾಕಿದರೆ ಮೂರು ವರ್ಷದ ಒಳಗೆ ತನ್ನ ಕೃಷಿ ಕೆಲಸಕ್ಕೆ ಸಹಾಯವಾಗುತ್ತದೆ, ಎಂಬ ರೈತನ ಹಿಗ್ಗಿನ ಆಶಯವನ್ನು 'ಆಣೀ ಪೀಣಿ' ಹಾಡುಗಳು ಅಭಿವ್ಯಕ್ತಿಸುತ್ತವೆ.

ವೃತ್ತಿ ಕಲೆಗಳಲ್ಲಿ ಪ್ರಮುಖರಾದ ಬುಡುಬುಡಿಕೆ ಮಾತಿನಲ್ಲಿ ಚತುರ ಮನೆನೋಡಿ ಮುಖನೋಡಿ ಕುಶಲ ಮಾತನಾಡುವ ಚಾಣಾಕ್ಷ. ಎಂಥ ಚತುರರ ಮನಸ್ಸನ್ನೂ ತನ್ನೆಡೆಗೆ ಸೆಳೆದುಕೊಳ್ಳುವ ಮಾತಿನ ಅಭಿವ್ಯಕ್ತಿಯು 'ಬುಡುಬುಡಿಕೆ' ಕಲೆಯಲ್ಲಿ ಕಾಣಸಿಗುತ್ತದೆ.

ಅಭಿನಯ ಪ್ರಧಾನ ಅಭಿವ್ಯಕ್ತಿಯಲ್ಲಿ ಬಹುರೂಪಿಗಳು ಒಬ್ಬರು. ಹಗಲು ಅಭಿನಯಗಾರರಾದ ಇವರು ವೇಷ ಧರಿಸಿಕೊಂಡು ಊರಿನ ವಿಶಾಲ ಸ್ಥಳದಲ್ಲಿ ಪಾತ್ರಕ್ಕೆ ತಕ್ಕಂತೆ ಅಭಿನಯಿಸುತ್ತಾ ವಾದ್ಯದೊಂದಿಗೆ ಹಾಡುತ್ತಾ ಎಲ್ಲರ ಮನಸ್ಸು ಸಂತೋಷಗೊಳಿಸುವುದರೊಂದಿಗೆ, ನಮ್ಮ ಪರಂಪರೆಯ ಮಹಾಭಾರತ, ರಾಮಾಯಣ, ವಾಸ್ತವಿಕ ಬದುಕಿನ ಮಹಾನ್ ವ್ಯಕ್ತಿಗಳ ಸಂದೇಶವನ್ನು ಜನಮನದಲ್ಲಿ ಬಿತ್ತುವ ಆಶಯ ಇಲ್ಲಿ ಪ್ರಧಾನವಾಗಿ ಪ್ರದರ್ಶಿತಗೊಳ್ಳುತ್ತದೆ.

ನೃತ್ಯದ ತಳಹದಿಯ ಮೇಲೆ ಸೃಷ್ಟಿಯಾದ ರಂಗಪ್ರದರ್ಶನ ಕಲಾಅಭಿವ್ಯಕ್ತಿಯು ಜನಪದರ ಅಚ್ಚುಮೆಚ್ಚಿನ ಕಲೆ. ಪೌರಾಣಿಕ ಕಥಾವಸ್ತು ವಿಶೇಷ ವೇಷಭೂಷಣ, ಭವ್ಯವಾದ ರಂಗಸಜ್ಜಿಕೆ ರೌದ್ರತೆಯಿಂದ ಕೂಡಿದ ಮಾತು, ಕುಣಿತಗಳು, ವಾದ್ಯದೊಂದಿಗೆ ಹಾಡುಗಾರಿಕೆ ಮುಂತಾದವುಗಳ ಮೂಲಕ, ಜನಸಾಮಾನ್ಯರ ಬದುಕಿನ ಮೇಲೆ ಪ್ರಭಾವ ಬೀರುವ ನಾಟ್ಯಕಲೆ ಮನರಂಜನೆಯ ಜೊತೆಗೆ ಒಳ್ಳೆಯ ಸಂದೇಶವನ್ನು ನೀಡುತ್ತದೆ.

ಸಂಗೀತ, ಸಾಹಿತ್ಯ ನೃತ್ಯಗಳಿಂದ ಕೂಡಿದ ರಂಗ ಪ್ರದರ್ಶನಕಲೆಯ ಅಭಿವ್ಯಕ್ತಿಯೇ ಬಯಲಾಟ. ಜಿಲ್ಲೆಯಲ್ಲಿ ಈ ಕಲೆಯಲ್ಲಿ ದೊಡ್ಡಾಟ, ಸಣ್ಣಾಟ ಎಂದು ಎರಡು ಪ್ರಕಾರಗಳನ್ನು ಕಾಣುತ್ತೇವೆ. ದೊಡ್ಡಾಟದಲ್ಲಿ ರಾಕ್ಷಸ ಪಾತ್ರಗಳ ಭಯಾನಕತೆ, ರಾಜಪಾತ್ರ ಗಾಂಭೀರ್ಯದಿಂದ ಕೂಡಿವೆ. ಸ್ತ್ರೀ ಪಾತ್ರಗಳಾದ ರಾಣಿ ದಾಸಿಯ ಪಾತ್ರಗಳೆಲ್ಲ ರೇಶ್ಮೆ ಸೀರೆ ಧರಿಸಿ ಸೌಮ್ಯ ಭಾವವನ್ನು ಅಭಿನಯಿಸುತ್ತವೆ. ಪಾತ್ರಧಾರಿಗಳ ಕುಣಿತದ ಸಂದರ್ಭದಲ್ಲಿ ಹಾಡು ವಾದ್ಯಗಳು ಜೊತೆಗೂಡಿದಾಗ ಇಡೀ ಮಂಟಪವು ನಾದ ಅಭಿವ್ಯಕ್ತಿಯಾಗಿ ತೋರುತ್ತದೆ.

ಇನ್ನೊಂದು ಪ್ರಕಾರವಾದ ಸಣ್ಣಾಟ ದೊಡ್ಡಾಟದಷ್ಟೇ ಹೆಸರುವಾಸಿಯಾಗಿದೆ. ಡಪ್ಪುವಾದ್ಯದ ಬಳಕೆಯಿಂದಲೇ ಇದಕ್ಕೆ ಡಪ್ಪಿನಾಟವೆಂದು ಕರೆಯುತ್ತಾರೆ. ಡಪ್ಪಿಗೆ ಬದಲಾಗಿ ಬೇರೆ ವಾದ್ಯ ಪರಿಕರಗಳು ಹೊಂದಿಕೆಯಾಗದ ಸಣ್ಣಾಟದಲ್ಲಿ ಮಾತಿಗಿಂತ ಹಾಡು ಪ್ರಧಾನವಾಗಿದೆ. ಸರಳವಾದ ವೇಷಭೂಷಣ, ರಂಗಸಜ್ಜಿಕೆ, ಯುದ್ಧ ಪ್ರಸಂಗಗಳ ನಿಷೇಧ, ಕಡಿಮೆ ಅವಧಿ ಮುಂತಾದವುಗಳಿಂದ ಸಣ್ಣಾಟ ಪ್ರಮುಖವಾಗಿದ್ದು ಹಾಡು ಹಾಗೂ ಸಂಭಾಷಣೆಗಳಲ್ಲಿ ವಿಶೇಷ ಅಭಿವ್ಯಕ್ತಿಯು ಕಾಣಬಹುದು.

"ಜನಪದ ಕಲೆಗಳಲ್ಲಿ ಬಹು ಜನಪ್ರಿಯವಾಗಿರುವ ರಂಗಕಲೆಗಳು. ಜನಪದ ರಂಗಕಲೆಗಳು ಸಮಷ್ಟಿಯ ಸೃಷ್ಟಿಯಾಗಿ ಜನರ ಎಷ್ಟೊ ವಿಚಾರಗಳಲ್ಲಿ ತಮ್ಮ ಪ್ರಭಾವವನ್ನು ಬೀರುತ್ತವೆ ಎಂದರೆ ತಪ್ಪಿಲ್ಲ. ರಸಾಸ್ವಾದನೆಯನ್ನು ನೀಡುವ ರಂಗಕಲೆ ಕೆಲವೊಮ್ಮೆ ಸಂಜೀವಿನಿಯಾಗುತ್ತದೆ. ಧೈರ್ಯ, ಶೌರ್ಯ, ಸಾಹಸ ಇತ್ಯಾದಿಗಳನ್ನು ವ್ಯಕ್ತಿಯಲ್ಲಿ ತುಂಬಲು ಇದು ಒಂದು ಒಳ್ಳೆಯ ಮಾಧ್ಯಮ. ದಡ್ಡನಿಗೆ ಬುದ್ಧಿ, ಹೇಡಿಗೆ ಧೈರ್ಯ, ಮಮತೆ, ವಾತ್ಸಲ್ಯ ಇತ್ಯಾದಿಗಳನ್ನು ನೀಡುವ ಖಣಿ"[೨೯] ಎಂಬುದನ್ನು ಕಲೆಗಳ ಅಭಿವ್ಯಕ್ತಿ ಹಾಗೂ ಆಶಯಗಳ ಹಿನ್ನಲೆಯಲ್ಲಿ ಕಾಣಬಹುದು.

ಗೀತೆಗಳನ್ನು ಗಂಡಸರು, ಹೆಂಗಸರು, ಮಕ್ಕಳು ಎಲ್ಲರೂ ಹಾಡುತ್ತಾರೆ. ಬದುಕಿನ ವಿವಿಧ ಸಂದರ್ಭಗಳಲ್ಲಿ ಈ ಹಾಡುಗಳು ಅಭಿವ್ಯಕ್ತಗೊಳ್ಳುತ್ತವೆ. ಹಾಡು ತನ್ನದೇ ಆದ ದಾಟಿ ಲಯವನ್ನು ಹೊಂದಿರುತ್ತವೆ. ಒಂದೇ ತ್ರಿಪದಿಯನ್ನು ಗರತಿ, ಬೀಸುವಾಗ ಕುಟ್ಟುವಾಗ ಹಾಡಿದರೆ, ಗಂಡಸರು ಹಂತಿ ಹೊಡೆಯುವಾಗ, ಕೋಲಾಟ ಆಡುವಾಗ ಹಾಡುತ್ತಾರೆ. ಆದರೆ ಹಾಡಿನ ಧ್ವನಿ ಹಾಡುಗಾರಿಕೆ ಮಾತ್ರ ಬದಲಾಗಿರುತ್ತದೆ. ಧ್ವನಿ ಬಲ್ಲ ಹಾಡುಗಾರರು ಹಾಡುಗಳ ಅಭಿವ್ಯಕ್ತಿ ಕ್ರಮದ ಹಿನ್ನೆಲೆಯಲ್ಲಿ ಇದು ಬೀಸುವ ಕುಟ್ಟುವ, ಹಂತಿ, ಮುಂತಾದ ಹಾಡು ಎಂದು ತಟ್ಟನೆ ಗುರುತಿಸುತ್ತಾರೆ. "ತ್ರಿಪದಿಗಳನ್ನು ದನಿಯೆಳೆದು ಹಾಡಿದ್ದಾರೆ. ತಾಳಬದ್ಧವಾಗಿ ಅಲ್ಲ. ಆದರೆ ಪ್ರತಿಯೊಂದು ತ್ರಿಪದಿಯ ಪ್ರತಿಪಾದವನ್ನೂ ಹಾಡುವಲ್ಲಿನ ಕಾಲಪ್ರಮಾಣ ನಿಯತವಾಗಿದ್ದು ಎಳೆದು ಹಾಡುವ ಧ್ವನಿ ಮಾಧುರ್ಯವಾಗಿದ್ದು ಲಯಬದ್ಧವಾಗಿರದೆ ಗತಿ ಪ್ರಧಾನವಾಗಿದೆ"[೩೦] ಎಂಬುದು ಅವುಗಳ ಅಭಿವ್ಯಕ್ತಿ ಕ್ರಮವಾಗಿವೆ.

ಬೀದರ ಜಿಲ್ಲೆಯು ಭೌಗೋಳಿಕವಾಗಿ ರಾಜಧಾನಿ ಬೆಂಗಳೂರಿನಿಂದ ಅತ್ಯಂತ ದೂರದಲ್ಲಿದ್ದು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಗಡಿಗಳಿಗೆ ಹೊಂದಿಕೊಂಡಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಈ ಪ್ರದೇಶವು ಹೈದ್ರಾಬಾದ ನಿಜಾಮನ ಆಳ್ವಿಕೆಗೆ ಒಳಗಾಗಿತ್ತು. ಅವರ ಕಾಲದಲ್ಲಿ ಉರ್ದುಭಾಷೆ ಪ್ರಧಾನ ಭಾಷೆಯಾಗಿ ಮತ್ತು ಶಿಕ್ಷಣದ ಮಾಧ್ಯಮವಾಗಿ ಬಳಕೆಯಲ್ಲಿತ್ತು. ಹೀಗಾಗಿ ಇಲ್ಲಿನ ಕನ್ನಡ ಭಾಷೆಯ ಮೇಲೆ ಮರಾಠಿ, ತೆಲುಗು, ಉರ್ದು, ಮುಂತಾದ ಭಾಷೆಗಳ ಪ್ರಭಾವ ಬೀರಿವೆ ಸಂಸ್ಕೃತ ಭಾಷೆಯ ಜೊತೆಗೆ ಇಂಗ್ಲೀಷ ಭಾಷೆಯ

ಬಳಕೆಯೂ ಇಲ್ಲಿದೆ. ಆದ್ದರಿಂದ ಜನಪದ ಕಲೆಗಳ ಮೇಲೆ ಮಿಶ್ರ ಭಾಷೆಯ ಅಭಿವ್ಯಕ್ತಿ ಕಂಡುಬರುತ್ತದೆ. ಹೆಚ್ಚಾಗಿ ಇದು ಬೀದರ ಜಿಲ್ಲೆಯ ಹಾಡುಗಾರಿಕೆಯಲ್ಲಿ ವಿಶೇಷವಾಗಿರುವುದನ್ನು ಗುರುತಿಸಬಹುದು. ಅನ್ಯಭಾಷೆ ಪದಗಳ ಬಳಕೆಯು ಇಲ್ಲಿಯ ಕಲಾ ಸಾಹಿತ್ಯದ ಮೇಲೆ ಅಪಾರವಾಗಿದೆ. **ಉದಾ** ಛತ್ತಿಸಕೋಟಿದೇವರು, ಮೈನಾದೋನು, ದೋನ ಹಜಾರ, ಬಾರದಾಗಿನ ಮಾತ, ಸವಾಲಕೆಳತೇನ, ಕುಂತ ಕೇಳರಿ ಹಮಚೌಕ, ಪಂದ್ರಾ ಅಗಸ್ಟ, ಚೌಕಾಶಿ, ನಾಚ, ತೋಲ, ರೈಲು, ಮೋಟರ, ಕಾರ, ಮಾಸ್ತರ, ಬಾರಾ, ಜಮೀನ, ದುಕಾನ, ನಸೀಬ, ಕಬುಲ್, ಸೋಳಾ, ಛತ್ತಿಸ, ಬತ್ತಿಸ, ಛಪ್ಪನ, ಹುಕುಂ, ಬಕ್ಕಳ, ಹಾನಾ, ಹಾರಾ, ನಾಭೀ, ಢಿಗಾರಿ, ಹೊತ್ರಾಳೆ, ಖರೆ, ಖುನಾ, ಜಲ್ದಿ, ಹೊತ್ತುಟಲೇ, ಝುಟ್ಪಂತ, ಪಾರ, ಪೋರಿ, ಜ್ವಾಕಿ, ಜತ್ತುನ್ನ, ಆಕಿನ, ಅವನ, ತಕೋ, ತೋಲ, ಥೆಮ್ಮಿಗಿ, ಚಾಲಕಿ, ಖಂಡುಗ, ಮುಂತಾದ ವಿಶಿಷ್ಟ ಪದಗಳು ಜಿಲ್ಲೆಯ ಭಾಷಿಕ ಅಭಿವ್ಯಕ್ತಿಯಲ್ಲಿ ಸಾಮಾನ್ಯವಾಗಿ ಒಡಗೂಡಿನಿಂತಿರುವುದನ್ನು ಗುರುತಿಸಬಹುದು.

"ಬೀದರ ಜಿಲ್ಲೆಯ ಕನ್ನಡ ಭಾಷೆಯು ಅನ್ಯ ಭಾಷೆಗಳ ಪ್ರಭಾವದಲ್ಲಿ ಅಶುದ್ಧ ಹಾಗೂ ಒರಟು ಎನಿಸಿದರೂ ಇಲ್ಲಿನ ಕನ್ನಡದ್ದೇ ಆದ ಪದಗಳನ್ನು ಸೋಸಿ ನೋಡಿದರೆ ಅವುಗಳಲ್ಲಿ ಶುದ್ಧವಾದ ಅರ್ಥವು ಅಡಗಿರುವುದನ್ನು ನಾವು ನೋಡುತ್ತೇವೆ. ಹೊತ್ರಾಳೆ, ಹೊತ್ತಹೊಂಟು, ಜಗಲಿ, ಹಾಲು ಹಿಂಡ್ಕೊ, ಸರಿಹೋದ, ಉರಿಹೊಂಟಾವ, ನೀರು ಕೊಂಡು ಬಾ, ದೊಡ್ಡಜೋಳ, ಭೂಮಿಗೆನಕಾಯಿ ಮುಂತಾದ ಪದಗಳ ಅರ್ಥವನ್ನು ಬಿಡಿಸಿ ನೋಡುಬಹುದು"[೩೧] ಎಂಬುದು ಗಮನಾರ್ಹವಾಗಿದೆ.

ಬೀದರ ಜಿಲ್ಲೆಯ ಪ್ರಾದೇಶಿಕ ಭಾಷೆಯ ವೈಶಿಷ್ಟ್ಯತೆಯ ಪದಬಳಕೆಯ ಗತ್ತು ಗಮ್ಮತ್ತು ತಿಳಿಯಬೇಕಾದರೆ ಕಲೆಗಳಲ್ಲಿ ಅಭಿವ್ಯಕ್ತಗೊಂಡಿರುವ ಅನ್ಯಭಾಷೆಗಳಾದ ಮರಾಠಿ, ಉರ್ದು, ಹಿಂದಿ, ತೆಲುಗು ಮುಂತಾದ ಭಾಷೆಗಳ ಪರಿಚಯವಿರಬೇಕೆಂದು ಹೇಳುವ ವಿದ್ವಾಂಸರ ಅಭಿಪ್ರಾಯ ಸೂಕ್ತವೆನಿಸುತ್ತದೆ. ಅಂತೆಯೇ ಈ ಭಾಷೆ ಎಷ್ಟೊ ಜನರಿಗೆ ತಟ್ಟನೆ ಅರ್ಥವಾಗುವುದಿಲ್ಲ. ಬೀದರ ಜಿಲ್ಲೆಯ ಭಾಷೆ ಕರ್ನಾಟಕದ ಇತರ ಪ್ರದೇಶದ ಕನ್ನಡ ಭಾಷೆಗಿಂತ ಭಿನ್ನವಾಗಿದ್ದು, ಗಡಿ ಜಿಲ್ಲೆಯ ಪ್ರಭಾವದಿಂದಾಗಿ ಇಲ್ಲಿನ ಭಾಷಿಕ ಅಭಿವ್ಯಕ್ತಿ ಇತರ ಕಡೆಗಳಿಗಿಂತ ವಿಶೇಷವಾಗಿ ಕಂಡುಬರುತ್ತದೆ.

ಜನಪದ ಕಲೆಗಳ ಅಭಿವ್ಯಕ್ತಿಯಲ್ಲಿ ವಾದ್ಯಗಳ ಸ್ಥಾನವೂ ಪ್ರಮುಖವಾಗಿದೆ. ಕಟ್ಟಿಗೆ, ಚರ್ಮ, ಲೋಹ, ಮಣ್ಣಿನ ವಾದ್ಯಗಳು, ಜನಪದ ಪ್ರದರ್ಶನ ಕಲೆಗಳ ಪ್ರಮುಖ ಅಭಿವ್ಯಕ್ತಿ ಮಾಧ್ಯಮಗಳಾಗಿವೆ. ಬಾರಿಸುವ ಹಿನ್ನೆಲೆಯಲ್ಲಿ ಈ ಕಲೆಗಳು ಏನನ್ನು ಹೇಳುತ್ತವೆ ಎಂಬ ಸೂಚನೆಯನ್ನು ವಾದ್ಯಗಳ ಅಭಿವ್ಯಕ್ತಿಯಿಂದ ಕಂಡುಕೊಳ್ಳಬಹುದು. ವಾದ್ಯ ನುಡಿಸುವವರು ಮನೆಯಲ್ಲಿ ಸಂಭ್ರಮವಿದ್ದಾಗ ಬಾರಿಸುವ ರೀತಿ ಬೇರೆಯಾಗಿರುತ್ತದೆ. ಸಾವಿನ ದು:ಖದ ಸಂದರ್ಭದಲ್ಲಿ ಬಾರಿಸುವ ರೀತಿ ಭಿನ್ನವಾಗಿರುತ್ತದೆ. ಹಳ್ಳಿಯಲ್ಲಿ ಸರಕಾರ ಸೂಚನೆ (ಅಂಜುಮನ ವಸೂಲಿ) ಇದ್ದಾಗ ಬಾರಿಸುವ ರೀತಿ ಮತ್ತೊಂದು ವಿಧವಾಗಿರುತ್ತದೆ. "ವೃತ್ತಿ ಗಾಯಕರಾಗಲಿ ಹವ್ಯಾಸಿ ಗಾಯಕರಾಗಲಿ ಪಕ್ಕವಾದ್ಯಗಳಿಲ್ಲದೇ ಅವರ ಬಾಯಿಯೇ ಏಳುವಂತಿಲ್ಲವೆನ್ನುವಷ್ಟು, ಜನಪದ ಹಾಡುಗಾರಿಕೆಯಲ್ಲಿ ಅವುಗಳ ಪ್ರಾಮುಖ್ಯತೆ ಉಂಟು. ತಾಳ ಸಂಗೀತ ಸಾಂಗತ್ಯದ ಹಿನ್ನೆಲೆಯಿಲ್ಲದೆ ಹಾಡು ಹೇಳುವ, ಕೇಳುವ, ಈರ್ವರಿಗೂ ಬೇಸರವನ್ನುಂಟು ಮಾಡುವುದರಲ್ಲಿ ಸಂದೇಹವಿಲ್ಲ. ಅಂತೆಯೇ ಹಾಡಿನ ಹಿನ್ನೆಲೆಯಲ್ಲಿ ಹಾಡುಗಾರಿಕೆಗೆ ಜೀವನದಲ್ಲಿ ಜೀವಸ್ಪಂದನವಿತ್ತು, ಉತ್ಸಾಹ ಚಿಲುಮೆ ಚಿಮ್ಮಿಸುವ ಪ್ರಮುಖ ಸಾಧನಗಳೆಂದರೆ ಈ ಪಕ್ಕ ವಾದ್ಯಗಳೆ"[೩೨] ಎಂಬುದು ಗಮನಾರ್ಹವಾಗಿದೆ.

ಒಟ್ಟಿನಲ್ಲಿ ಜನಪದ ಕಲೆಗಳ ಪ್ರಧಾನ ಆಶಯ 'ಸಂತೋಷವೇ' ಆಗಿದ್ದರೂ, ಅದರೊಂದಿಗೆ ಮನರಂಜನೆ, ಶ್ರಮಪರಿಹಾರ, ಆರಾಧನಾ ಭಾವ, ಪ್ರದರ್ಶನದ ಉದ್ದೇಶ ದೈವಭಕ್ತಿ ಮುಂತಾದವುಗಳನ್ನು ಕಾಣಬಹುದು. ಹಾಗೂ ಧರ್ಮ, ತತ್ತ್ವ, ನೀತಿ ಬೋಧನೆಯು ಅಲ್ಲಿ ವ್ಯಕ್ತವಾಗಿದ್ದು, ಅವುಗಳನ್ನು ಅಯಾ ಕಲೆಗಳು ಸೂಕ್ತ ರೀತಿಯಲ್ಲಿ ಅಭಿವ್ಯಕ್ತಿಸುತ್ತವೆ ಎಂದು ಹೇಳಬಹುದು.

# ಅಡಿ ಟಿಪ್ಪಣಿ

೧. ಡಾ. ಹಿ. ಶಿ. ರಾಮಚಂದ್ರೇಗೌಡ, ಡಾ. ಕೃಷ್ಣಮೂರ್ತಿ ಹನೂರ(ಸಂ) : ಸುವರ್ಣ ಜಾನಪದ (ಸಂಪುಟ-೧), ಪು-೧೧೪-೧೯೯೮.
೨. ಡಾ. ಅಂಬಳಿಕೆ ಹಿರಿಯಣ್ಣ, ಡಾ. ಶಾಲಿನಿ ರಘುನಾಥ (ಸಂ) : ಜನಪದ ಕಲೆ : ಅವಲೋಕನ, ಪು-೬೬/೬೭-೨೦೧೦.
೩. ಡಾ. ಅಂಬಳಿಕೆ ಹಿರಿಯಣ್ಣ, ಡಾ. ಶಾಲಿನಿ ರಘುನಾಥ (ಸಂ) : ಜನಪದ ಕಲೆ : ಅವಲೋಕ, ಪು-೫೧- ೨೦೧೦.
೪. ಡಾ. ಸುಶೀಲಾ ಪಿ ಉಪಾಧ್ಯಾಯ : ಜನಪದ ಆರಾಧನೆ ಮತ್ತು ರಂಗಕಲೆ, ಪುಟ-೧-೧೯೮೯.
೫. ಡಾ. ಶಶಿಕಲಾ ಮೋಳ್ದಿ (ಸಂ) : ವಂದನೆ ಡಾ. ಬಿ. ಬಿ. ಹೆಂಡಿ ಅಭಿನಂದನ ಗ್ರಂಥ, ಪು-೯೬-೧೯೮೮.
೬. ಡಾ. ಎಚ್. ಟಿ. ಪೋತೆ : ಹೈದ್ರಾಬಾದ್ ಕರ್ನಾಟಕ ಜನಪದ ಪ್ರಾದರ್ಶನ ಕಲೆಗಳು, ಪು-೨೪-೨೦೦೦.
೭. ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ ಹಾಡು.
೮. ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ ಹಾಡು.
೯. ಡಾ. ಈಶ್ವರಯ್ಯ ಮಠ ಡಾ. ಚಂದ್ರಕಲಾ ಬಿದರಿ (ಸಂ) : ಲೋಕಸಿರಿ ಸ್ಮರಣ ಸಂಚಿಕೆ, ಪು-೧೮೦-೨೦೧೧.
೧೦. ಹೆಚ್. ಕಾಶಿನಾಥರೆಡ್ಡಿ (ಸಂ) : ಕುಕ್ಕೇನ ಹೂ, ಪು-೧೨-೨೦೧೧.
೧೧. ಡಾ. ಈಶ್ವರಯ್ಯ ಮಠ, ಡಾ. ಚಂದ್ರಕಲಾ ಬಿದರಿ (ಸಂ) : ಲೋಕಸಿರಿ ಸ್ಮರಣ ಸಂಚಿಕೆ, ಪು-೧೮೭-೨೦೧೧.
೧೨. ಡಾ. ಸೋಮನಾಥ ನುಚ್ಚಾ : ಬೀದರ ಜಿಲ್ಲೆಯ ಕೋಲಾಟ ಒಂದು ಅಧ್ಯಯನ ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ, ಪು-೨೨೨-೧೯೯೧.
೧೩. ಕೆ. ಅನಂತರಾಮರಾವ್(ಪ್ರ ಸಂ) : ಸುವರ್ಣ ಕರ್ನಾಟಕದರ್ಶನ ( ೫೦ ಸಂವತ್ಸರಗಳು), ಪು-೬೩೨-೨೦೦೬.
೧೪. ಚೆನ್ನಣ್ಣ ವಾಲೀಕಾರ : ಜಾನಪದ ಲೋಕ, ಪು-೨೩೦-೨೦೦೭.
೧೫. ಡಾ. ಹಿ. ಶಿ. ರಾಮಚಂದ್ರೇಗೌಡ, ಡಾ. ಕೃಷ್ಣಮೂರ್ತಿ ಹನೂರ (ಸಂ) : ಸುವರ್ಣ ಜಾನಪದ (ಸಂಪುಟ-೧), ಪು-೩೯೫-೧೯೯೮.
೧೬. ಕ್ಯಾತನಹಳ್ಳಿ ರಾಮಣ್ಣಾ (ಸಂ) : ಬೀದರ ಜಿಲ್ಲೆಯ ಜನಪದ ಗೀತೆಗಳು, ಪು-೫೮-೧೯೭೬.
೧೭. ಕ್ಯಾತನಹಳ್ಳಿ ರಾಮಣ್ಣಾ (ಸಂ) : ಬೀದರ ಜಿಲ್ಲೆಯ ಜನಪದ ಗೀತೆಗಳು, ಪು-೬೭-೧೯೭೬.
೧೮. ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ ಹಾಡು.
೧೯. ಡಾ ಗಂಗಾಬಿಕಾ ಪಾಟೀಲ (ಸಂ) ಶಿಖರಗನ್ನಡಿ, ಪುಟ-೨ ಪ್ರ.ವ.-೨೦೦೭.
೨೦. ಅರ್ವಿಯಸ್ ಸುಂದರಂ. ಡಾ.ಎನ್.ಎಸ್. ತಾರಾನಾಥ(ಸಂ):ಜಾನಪದ ತತ್ತ್ವಗಳು, ಪು-೧೩೫-೧೯೯೯.
೨೧. ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ ಹಾಡು.
೨೨. ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ ಹಾಡು.
೨೩. ಡಾ. ಸೋಮನಾಥ ನುಚ್ಚಾ : ಬೀದರ ಜಿಲ್ಲೆಯ ಕೋಲಾಟ-ಒಂದು ಅಧ್ಯಯನ ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ, ಪು-೨೧೪-೧೯೯೧.
೨೪. ಚಂದ್ರಪ್ಪ ಹೆಬ್ಬಾಳಕರ, ಮರಿಯಪ್ಪ ಹೊಸಮನಿ (ಸಂ) : ಬೀದರ ಜಿಲ್ಲೆಯ ಮೊಹರಮ್ ಪದಗಳು, ಪು-೩-೨೦೦೯.
೨೫. ಡಾ. ಪಿ. ಕೆ. ಖಂಡೋಬಾ : ಜಾನಪದ ಮುನ್ನೋಟ, ಪು-೯೭-೧೯೯೩.
೨೬. ಡಾ. ಶಿವಾನಂದ ಗುಬ್ಬಣ್ಣವರ : ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯ, ಪು-೧೧೪-೨೦೦೧.
೨೭. ಡಾ. ಬಸವರಾಜ ಪೋಲಿಸ ಪಾಟೀಲ : ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ, ಪು-೩೦೬-೨೦೦೧.
೨೮. ಮ. ಮಾ. ಬೋರಾಳಕರ್ (ಸಂ) : ಬೀದರ ಜಿಲ್ಲೆಯ ಆಣೀ ಪೀಣೀ ಹಾಡುಗಳು, ಪು-೭-೨೦೦೪.
೨೯. ಅರ್ವಿಯಸ್ ಸುಂದರಂ ಡಾ. ಎನ್. ಎಸ್. ತಾರಾನಾಥ (ಸಂ) : ಜಾನಪದ ತತ್ತ್ವಗಳು, ಪು-೧೩೮-೧೯೯೯.
೩೦. ಡಾ. ಹಿ. ಶಿ. ರಾಮಚಂದ್ರೇಗೌಡ, ಡಾ. ಕೃಷ್ಣಮೂರ್ತಿ ಹನೂರ (ಸಂ) : ಸುವರ್ಣಜಾನಪದ (ಸಂಪುಟ-೧) ಪು-೫೧೭-೧೯೯೮.
೩೧. ಪ್ರೊ. ವೀರೇಂದ್ರ ಸಿಂಪಿ ಪಂಚಾಕ್ಷರಿ ಪುಣ್ಯಶೆಟ್ಟಿ (ಸಂ) : ಬೀದರ ಜಿಲ್ಲಾ ದರ್ಶನ, ಪು-೨೯-೧೯೯೭.
೩೨. ಡಾ. ಎಂ. ಎಸ್. ಸುಂಕಾಪುರ(ಸಂ) : ಜಾನಪದ ಸಾಹಿತ್ಯದರ್ಶನ ದರ್ಶನ-೪, ಪು-೧೯-೧೯೭೮.